**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 9520/2021 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಸ್ಮಿತಾ |
| ತಂದೆಃ ಗಂಡ | ಃ | ಪ್ರಕಾಶ ಜೈನ |
| ವಯಸ್ಸು | ಃ | ೫೭ ವರ್ಷ |
| ಉದ್ಯೋಗ | : | ಮುಖ್ಯ ಗುರುಗಳು, ಸರಕಾರಿ ಪ್ರೌಢ ಶಾಲೆ ಸುಂಟನೂರು |
| ವಾಸಸ್ಥಳ | ಃ | ಸುಂಟನೂರು |

ದಿನಾಂಕಃ೨೩.೦೩.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ನಾನು 2012 ರಿಂದ 2016 ರವರೆಗೆ ಹಿತ್ತಲಶಿರೂರ ಸರಕಾರಿ ಪ್ರೌಢ ಶಾಲೆಯಲ್ಲಿ ಮುಖ್ಯ ಗುರುಗಳು ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

2015 ರಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರು ಮತ್ತು ಸದಸ್ಯರು ನನಗೆ ಕರೆ ಮಾಡಿ ಶಾಲೆಯ ಬಾಗಿಲು ಕೀಲಿ ಮುರಿದು ಯಾರೋ ಅಕ್ಕಿ, ಬೇಳೆ, ಎಣ್ಣೆಯನ್ನು ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿದರು, ಮತ್ತು ನನಗೆ ನಾವು ಈಗಾಗಲೇ ಪೋಲಿಸ್ ಠಾಣೆಯಲ್ಲೇ ಇದ್ದೇವೆ ನೀವು ಬಂದು ಫಿರ್ಯಾದಿ ಸಲ್ಲಿಸಿ ಎಂದು ಹೇಳಿದರು. ಆಗ ನಾನು ನೇರವಾಗಿ ಶಾಲೆಗೆ ಹೋಗದೇ ಠಾಣೆಗೆ ನೇರವಾಗಿ ಹೋಗಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಪಿರ್ಯಾದಿಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಫಿರ್ಯಾದಿಯನ್ನು ನಿಪಿ-1 ಎಂದು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ** ಶ್ರೀ ಎಂ.ವಿ.ಇ. **ವಕೀಲರಿಂದ**

ಕಳ್ಳತನವಾದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಎಸ್.ಡಿ.ಎಂ.ಸಿ. ಸದಸ್ಯರು ನನಗೆ ಹೇಳಿದ ನಂತರ ಗೊತ್ತಾಯಿತು ಎಂಧರೆ ಸರಿ. ಎಸ್.ಡಿ.ಎಂ.ಸಿ. ಅಧ್ಯಕ್ಷರು ಕರೆ ಮಾಡಿ ನಾವು ಫಿರ್ಯಾದಿ ನೀಡಲು ಬಂದಿರುತ್ತೇವೆ ನೀವು ಬಂದು ಫಿರ್ಯಾದಿಗೆ ಸಹಿ ಮಾಡಿ ಎಂದು ಕರೆದಾಗ ನಾವು ಹೋಗಿರುತ್ತೇನೆ ಎಂಧರೆ ಸರಿ. ನಮ್ಮ ಶಾಲೆಗೆ ಬಿಸಿ ಊಟದ ಸಲುವಾಗಿ ಎಷ್ಟು ದವಸ ಧಾನ್ಯಗಳು ಬಂದಿರುತ್ತವೆ ಮತ್ತು ಎಷ್ಟು ಖರ್ಚಾಗಿರುತ್ತದೆ ಎಂದು ರಜಿಸ್ಟರದಲ್ಲಿ ನಮೂದು ಮಾಡಿರುತ್ತೇವೆ ಎಂಧರೆ ಸರಿ. ಸದರಿ ಫಿರ್ಯಾದಿ ಕೊಡುವ ದಿನದಂದಾಗಲಿ ನಂತರ ತನಿಖೆ ಮಾಡುವ ಸಮಯದಲ್ಲಾಗಲಿ ನಮ್ಮ ಶಾಲೆಯಲ್ಲಿ ಬಿಸಿ ಊಟದ ಎಷ್ಟು ದವಸ ಧಾನ್ಯಗಳು ಉಳಿದಿರುತ್ತವೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿ.

2015 ರಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರು ಮತ್ತು ಸದಸ್ಯರು ನನಗೆ ಕರೆ ಮಾಡಿ ಶಾಲೆಯ ಬಾಗಿಲು ಕೀಲಿ ಮುರಿದು ಯಾರೋ ಅಕ್ಕಿ, ಬೇಳೆ, ಎಣ್ಣೆಯನ್ನು ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ, ನನಗೆ ನಾವು ಈಗಾಗಲೇ ಪೋಲಿಸ್ ಠಾಣೆಯಲ್ಲೇ ಇದ್ದೇವೆ ನೀವು ಬಂದು ಫಿರ್ಯಾದಿ ಸಲ್ಲಿಸಿ ಎಂದು ಹೇಳಿದರು, ಆಗ ನಾನು ನೇರವಾಗಿ ಶಾಲೆಗೆ ಹೋಗದೇ ಠಾಣೆಗೆ ನೇರವಾಗಿ ಹೋಗಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ